# ವಿಧಾನ ಪರಿಷತ್ ಸದಸ್ಯರಾದ ಶ್ರೀ ನವೀನ್ ಕೆ.ಎಸ್. ರವರು ಮಂಡಿಸಿರುವ ಶೂನ್ಯವೇಳೆ ಪ್ರಶ್ನೆಗೆ ಉತ್ತರ

ಪ್ರಶ್ನೆ: ದಿನಾಂಕ: 04.12.2023 ರಂದು ಬಿ.ಜೆ.ಪಿ. ನಾಯಕ ಶ್ರೀ ಪೃಥ್ವಿಸಿಂಗ್ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ. ಬೆಳಗಾವಿಯ ಜಯನಗರದ ತಮ್ಮ ಮನೆಯಲ್ಲಿದ್ದ ಪೃಥ್ವಿಸಿಂಗ್ ನನ್ನ ಮನೆಯಿಂದ ಹೊರಗೆ ಕರೆದು ವಿಧಾನ ಪರಿಷತ್ ಸದಸ್ಯರ ಉಪಸ್ಥಿತಿಯಲ್ಲಿ ಅವರ ಆಪ್ತ ಸಹಾಯಕ, ಗನ್‌ಮ್ಯಾನ್ ಸೇರಿದಂತೆ ಐದಾರು ಜನ ಚಾಕುವಿನಿಂದ ಹೊಟ್ಟೆ, ಕೈ, ಬೆನ್ನಿಗೆ ಇರಿದು ಮಾರಣಾಂತಿಕ ಹಲ್ಲೆ ನಡೆಸಿದ್ದು, ಇದು ಸಿ.ಸಿ. ಟಿವಿಯಲ್ಲಿ ದಾಖಲಾಗಿದೆ. ಹಲ್ಲೆ ನಡೆಯುವ ಸಂದರ್ಭದಲ್ಲಿ ಪೃಥ್ವಿಸಿಂಗ್‌ರವರ ಮನೆಯವರ ಮೊಬೈಲ್ ಸಹ ಕಿತ್ತುಕೊಂಡಿದ್ದಾರೆ. ಪೃಥ್ವಿಸಿಂಗ್‌ರವರ ಬಳಿ ಇರುವ ದಾಖಲೆಯೊಂದನ್ನು ಪಡೆಯುವ ವಿಚಾರವಾಗಿ ವಾಗ್ವಾದ ನಡೆದು ಹಲ್ಲೆ ನಡೆದಿದೆ. ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಅದೂ ಹಾಡುಹಗಲೇ ಈ ರೀತಿ ಹಲ್ಲೆ ನಡೆದಿರುವುದು ಖಂಡನೀಯ. ರಾಜ್ಯದ ಸಚಿವರೊಬ್ಬರ ಸಹೋದರರಾಗಿರುವ ವಿಧಾನ ಪರಿಷತ್ ಸದಸ್ಯರ ಸಮ್ಮುಖದಲ್ಲೇ ಅವರ ಬೆಂಬಲಿಗರು ಹಲ್ಲೆ ನಡೆಸಿದರೂ ಸಹ ಪೊಲೀಸರು ಈವರೆಗೆ ಎಫ್.ಐ.ಆರ್ ದಾಖಲಿಸಿ ಯಾರನ್ನೂ ಬಂಧಿಸಿಲ್ಲ ಇದು ಪೊಲೀಸರ ವೈಫಲ್ಯವೋ ಅಥವಾ ಪೊಲೀಸರ ಕುಮ್ಮಕ್ಕಿನಿಂದಲೇ ಈ ರೀತಿಯ ಘಟನೆಗಳು ನಡೆಯುತ್ತಿವೆಯೋ ಎಂಬ ಅನುಮಾನ ಕಾಡುತ್ತಿರುವ ಕುರಿತು.

ಉತ್ತರ: ಶ್ರೀ ಪುಪ್ಪಿನ್ದರಸಿಂಗ್ ಸಂತೋಕ ಸಿಂಗ್ ಲುಧಾರ, 44 ವರ್ಷ, ಫ್ಲಾಟ್ ನಂ. 61, ಸಿ.ಟಿ.ಎಸ್. ನಂ. 3237, ಜಯನಗರ ಹಿಂಡಲಗಾ ಬೆಳಗಾವಿ ರವರು ದಿನಾಂಕ: 04.12.2023 ರಂದು ಆರೋಪಿತರಾದ (1) ಸುಜೀತ ಜಾಧವ (2) ಸದ್ದಾಂ (3) ಚನ್ನರಾಜ ಹಟ್ಟಿಹೊಳಿ ರವರುಗಳು ಇನ್ನೋವಾ ಕ್ರಿಸ್ಟಾ ಕಾರಿನಲ್ಲಿ ಫಿರ್ಯಾದಿದಾರರ ಮನೆಗೆ ಬಂದು ಅವಾಚ್ಯವಾಗಿ ಬೈಯ್ದು ಬೆದರಿಕೆ ಹಾಕಿ ನೀನು ದೊಡ್ಡ ವ್ಯಕ್ತಿ ಆಗಿರುವೆ, ನಮ್ಮ ವಿರುದ್ಧ ಹೋಗುತ್ತಿದ್ದು, ನಾವು ಈಗಾಗಲೇ ನಿನಗೆ ಎಚ್ಚರಿಕೆ ಕೊಟ್ಟಿದ್ದರೂ ನೀನು ನಮ್ಮ ಮಾತು ಕೇಳುತ್ತಿಲ್ಲ ಎಂದು ಫಿರ್ಯಾದಿಗೆ ಕೈಯಿಂದ ಹೊಡೆದು ಮತ್ತು ಹರಿತವಾದ ಆಯುಧದಿಂದ ಕೈಗೆ ಹೊಡೆದು ಗಾಯಪಡಿಸಿ ದೌರ್ಜನ್ಯ ಎಸಗಿದ ಬಗ್ಗೆ ಎ.ಪಿ.ಎಂ.ಸಿ. ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 185/2023 ಕಲಂ 323, 324, 143, 147, 148, 379 ಜೊತೆಗೆ 149 ಐಪಿಸಿ ಹಾಗೂ 3(1)(ಆ)(ಎಸ್) 3(2) ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿಕೊಂಡು ಎಸಿಪಿ, ಮಾರ್ಕೆಟ್ ಉಪವಿಭಾಗ, ಬೆಳಗಾವಿ ರವರು ತನಿಖೆ ಕೈಗೊಂಡಿರುತ್ತಾರೆ.

HD/40/PCQ/2023

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು.